## ಪೆರ್ವಾಜೆ ಸ.ಪ್ರೌ.ಶಾಲೆ ಇಂಟರಾಕ್ಟ್ ಕ್ಲಬ್‌ನ ಪದಪ್ರದಾನ ಕಾರ್ಯಕ್ರಮ



ಇಂಟರಾಕ್ಟ್ ಕ್ಲಬ್ಬಿನ ನೂತನ ಅಧ್ಯಕ್ಷರ ಪದಪ್ರದಾನ ಕಾರ್ಯಕ್ರಮವು ದಿನಾಂಕ 05–08–2024ರಂದು ನೆರವೇರಿತು. ಇಂಟರಾಕ್ಟ್‌ನ ಅಧ್ಯಕ್ಷರಾಗಿ ಸೃಜನ್ ಕುಮಾರ್ ಎಸ್., ಕಾರ್ಯದರ್ಶಿಯಾಗಿ ಸಾಯಿ ಶೆಟ್ಟಿ ಆಯ್ಕೆಯಾದರು.

ರೋಟರಿ ಸಂಸ್ಥೆಯ ಅಧ್ಯಕ್ಷರಾದ ಇಕ್ಬಾಲ್ ಅಹಮದ್ ಪದಪ್ರದಾನ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು. Interact Chairman ಜ್ಯೋತಿ ಪದ್ಮನಾಭ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ವಲಯ ಸೇನಾನಿ ರೊ। ಸುರೇಶ್ ನಾಯಕ್ ಪ್ಲಾಸ್ಟಿಕ್ ನಿರ್ವಹಣೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ನಿವೃತ್ತ ಮುಖ್ಯ ಶಿಕ್ಷಕಿ ಹರ್ಷಿಣಿ ಕೆ. ಉತ್ತಮ ಕೆಲಸ ಮಾಡಿದವರನ್ನು ಮಾದರಿಯನ್ನಾಗಿರಿಸಿಕೊಂಡು ವಿದ್ಯಾರ್ಥಿಗಳು ಸಮಾಜದ ಏಳಿಗೆಗಾಗಿ ಶ್ರಮಿಸಬೇಕೆಂದು ತಿಳಿ ಹೇಳಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್‌ನ ಕಾರ್ಯದರ್ಶಿಯಾದ ರೊ। ಗಣೇಶ ಸಾಲಿಯಾನ್ ರೋಟರಿಯ ಇನ್ನಿತರ ಸದಸ್ಯರುಗಳಾದ ರೊ। ನವೀನ್ ಶೆಟ್ಟಿ, ರೊ। ಬಾಲಕೃಷ್ಣ ದೇವಾಡಿಗ, ರೊ। ಸುಬ್ರಮಣ್ಯ ದೇವಾಡಿಗ ಮೊದಲಾದವರು ಉಪಸ್ಥಿತರಿದ್ದರು. ಶಾಲೆಯ ಮುಖ್ಯಶಿಕ್ಷಕ ದಿವಾಕರ್ ರೋಟರಿ ಸಂಸ್ಥೆಯ ಸರ್ವರನ್ನು ಸ್ವಾಗತಿಸಿದರು. ವಿದ್ಯಾರ್ಥಿನಿಯರಾದ ದಿಶಾ ಕಾರ್ಯಕ್ರಮ ನಿರೂಪಿಸಿ, ಪ್ರತೀಕ್ಷಾ ವಂದಿಸಿದರು.




ರೋಟರಿ ಆ್ಯನ್ಸ್ ಪದಪ್ರದಾನ ಕಾಯಕ್ರಮವು ದಿನಾಂಕ 17–07–2024ರಂದು ರೋಟರಿ ಬಾಲಭವನದಲ್ಲಿ ನಡೆಯಿತು. 2024–25ರ ಅಧ್ಯಕ್ಷೆಯಾಗಿ ವಿನಯ ಅರುಣ್ ಶೆಟ್ಟಿ, ಕಾರ್ಯದರ್ಶಿಯಾಗಿ ರಕ್ಷಾ ಬಲ್ಲಾಳ್ ಆಯ್ಕೆಯಾದರು. ಮುಖ್ಯ ಅತಿಥಿಯಾಗಿ ಮುನಿಯಾಲು ಸರಕಾರಿ ಜ್ಯೂನಿಯರ್ ಕಾಲೇಜಿನ ಪ್ರಾಂಶುಪಾಲರಾದ ಶಾಲಿನಿ ಡಿ'ಆಳ್ವ ಭಾಗವಹಿಸಿದ್ದರು.





Stephanie A. Urchick
RI President


Rtn. CA Dev Anand
District Governor

SERVICE ABOVE SELF

# SERVICE

THE OFFICIAL HOUSE BULLETIN OF

Rotary

## ROTARY CLUB KARKALA


Rtn. Iqbal Ahmed
President


Rtn. Ganesh Salian
Secretary

THE MAGIC OF ROTARY

ZONE- 5, R.I. DIST.3182 Club No. 15726 Charter Date : 09-03-1964.

61 YEARS

Vice President :
Rtn. Balakrishna Devadiga
Mob : 9845838898

Immediate Past President :
Rtn. John R. D'silva
Mob : 9845015793

Joint Secretary :
Rtn. Anthony Elias D'silva
Mob : 9606813167

Treasurer :
Rtn. Chethan Nayak
Mob : 9880726811

Sargeant at arms :
Rtn. Shreesha Bhat
Mob : 9986795950

DIRECTORS

President Elect &
Club Service Director :
Rtn. Naveen Shetty
Mob : 9448254344

Vocational Service :
Rtn. Shekar H.
Mob : 9008031537

Community Service :
Rtn. Soujanya Upadhyaya
Mob : 9845356244

International Service :
Rtn. Yogish Prabhu
Mob : 9108749676

New Generation & Youth Service :
Rtn. Harshini V. Shetty
Mob : 9880644905

Chairman Club Membership
Rtn. Sandeep Jain
Mob : 9901894084

Chairman T.R.F.
Rtn. Hariprakash Shetty
Mob : 9632826562

Chairman Public Image
Rtn. Madhukar Hegde
Mob : 9972354497

Chairman Pulse Polio :
Rtn. Dr. Jnanesh Kamath
Mob : 9845212442

I.T. Website :
Rtn. Venugopal P.S.
Mob : 9902518746

District Project :
Rtn. Vasanth M.
Mob : 9449166492

Bulletin Editor :
Rtn. Rekha Upadhyaya
Mob : 9900213535

WEEKLY EDITION AUGUST 07, 2024 ISSUE - 6


## ವಾರದ ಸಭೆ





ಕಾರ್ಕಳ ರೋಟರಿ ಸಂಸ್ಥೆಯ ವಾರದ ಸಭೆಯು ದಿನಾಂಕ 31.7.2024ನೇ ಬುಧವಾರ ಸಾಯಂಕಾಲ 6.30ಕ್ಕೆ ರೋಟರಿ ಬಾಲಭವನದಲ್ಲಿ ಜರಗಿತು. ಕಾರ್ಕಳ ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ। ಇಕ್ಬಾಲ್ ಅಹಮದ್ ಇವರು ಅಧ್ಯಕ್ಷತೆಯನ್ನು ವಹಿಸಿಕೊಂಡಿರುತ್ತಾರೆ. ಪಿಡಿಜಿ ಡಾ. ರೊ। ಜಯಗೌರಿ ಹಾಡಿಗಲ್ ಇವರು ಮುಖ್ಯ ಅತಿಥಿಯಾಗಿ ಭಾಗವಹಿಸಿರುತ್ತಾರೆ.

ಮುಖ್ಯ ಅತಿಥಿಯಾದ ಪಿಡಿಜಿ ಡಾ. ರೊ। ಜಯ ಗೌರಿ ಹಾಡಿಗಲ್ ಅವರು ತಾಯಿ ಮಕ್ಕಳ ಆರೋಗ್ಯದ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿರುತ್ತಾರೆ. ಈ ಸಂದರ್ಭದಲ್ಲಿ ಪಿ ಡಿ ಜಿ ರೊಟೇರಿಯನ್ ಡಾಕ್ಟರ್ ಜಯ ಗೌರಿ ಹಾಡಿಗಲ್ ಇವರನ್ನು ಸಂಸ್ಥೆಯ ವತಿಯಿಂದ ಅಭಿನಂದಿಸಲಾಯಿತು. (3ನೇ ಪುಟಕ್ಕೆ)

We meet on every Wednesday 6.30 pm at Rotary Bala Bhavan, Court Road
Behind Ananthashayana Temple, Karkala - 574104

## *From the Editors Desk*

Dear friends in Rotary,



Dear Friends in Rotary

A Rotary club is composed of persons with appropriate qualifications of good Characters and Reputation, a business or professional classification and who serve in an executive of Managerial capacity "The Rotary Designated month in August - Membership & New Club Development Month


*Thank you.*

Your's in Rotary

**Rtn Rekha Upadhyaya**

## ROTARY INFORMATION

Sangkoo Yun a member of the Rotary Club of Sae Hanyang, Seoul, Korea has been selected to become Rotary president for 2026-27.



The selection of the nominating committee to become Rotary International's president for 2026-27. He will be officially declared the president-nominee on 15 September if no other candidates challenge him.

## Happy Birthday

Aug 7 **Rtn. Vijendra Kumar**

Aug 8 **Rtn. Jeevan Kotian**

Aug 9 **Rtn. Suvarna Nayak**



**(1ನೇ ಪುಟದಿಂದ)** ರೊ। ಜ್ಯೋತಿ ಪದ್ಮನಾಭ ಇವರು ರೋಟರಿ ಮಾಹಿತಿಯನ್ನು ನೀಡಿರುತ್ತಾರೆ. ಬುಲೆಟಿನ್ ನಿರ್ದೇಶಕರಾದ ರೊ। ರೇಖಾ ಉಪಾಧ್ಯಾಯ ಇವರ ಮುಂದಾಳತ್ವದಲ್ಲಿ ತಯಾರಾದ 5ನೇ ಸಂಸ್ಥಾ ಪತ್ರಿಕೆಯನ್ನು ರೊ। ಚಿತ್ರವೃಂದ ಹರಿಪ್ರಕಾಶ್ ಶೆಟ್ಟಿ ಇವರು ಬಿಡುಗಡೆಗೊಳಿಸಿದರು.

ಸಂಸ್ಥೆಯ ವತಿಯಿಂದ 5 ಜನ ರೋಟರಿ ಸದಸ್ಯರ ಹುಟ್ಟುಹಬ್ಬದ ಪ್ರಯುಕ್ತ ಅವರಿಗೆ ಅಧ್ಯಕ್ಷರ ವತಿಯಿಂದ ಗಿಫ್ಟನ್ನು ನೀಡಲಾಯಿತು. ಈ ವಾರದ ಕ್ವಿಜ್ ಅನ್ನು ರೊ। ರೇಖಾ ಉಪಾಧ್ಯಾಯರು ನಡೆಸಿಕೊಟ್ಟಿರುತ್ತಾರೆ. ರೊ। ತುಕರಾಮ ನಾಯಕ್, ರೊ। ಜ್ಯೋತಿ ಪದ್ಮನಾಭ ಇವರು ಆಯ್ಕೆಯಾಗಿರುತ್ತಾರೆ. ಲಕ್ಕಿ ರೋಟರಿ ಸದಸ್ಯರಾಗಿ ರೊ। ಶಶಿಧರ್ ಇವರು ಆಯ್ಕೆಯಾಗಿರುತ್ತಾರೆ.

ಇಂದಿನ ವಾರದ ಉಪಹಾರದ ಪ್ರಾಯೋಜಕರಾದ ಚಂದ್ರಶೇಖರ ಹೆಗ್ಡೆ ಇವರಿಗೆ ಧನ್ಯವಾದ ಸಲ್ಲಿಸಿದರು. ಕಾರ್ಯದರ್ಶಿ ರೊ। ಗಣೇಶ ಸಾಲಿಯಾನ್ ವಂದನಾರ್ಪಣೆಗೈದರು.

## ವಿಶ್ವ ಸ್ತನ್ಯಪಾನ ಸಪ್ತಾಹ ಆಚರಣೆ




ರೋಟರಿ ಸಂಸ್ಥೆ ಕಾರ್ಕಳ, ಲ್ಯಾನ್ಸ್ ಕ್ಲಬ್ ಕಾರ್ಕಳ, ಜಿಲ್ಲಾ ಪಂಚಾಯತ್ ಉಡುಪಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಕಾರ್ಕಳ, ಸರಕಾರಿ ಸಾರ್ವಜನಿಕ ಆಸ್ಪತ್ರೆ ಕಾರ್ಕಳ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 01–08–2024ರಂದು ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸ. ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಶಶಿಕಲಾ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ತನ್ಯ ಪಾನ ಮಹತ್ವದ ಪ್ರತಿಜ್ಞಾವಿಧಿ ಬೋಧಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಮಕ್ಕಳ ತಜ್ಞರಾದ ಡಾ. ಸೌಜನ್ಯ ಇವರು ಸ್ತನ್ಯ ಪಾನದ ಮಹತ್ವ ಮಗುವಿನ ಆರೈಕೆ ಹಾಗೂ ತಾಯಿಯ ಜವಾಬ್ದಾರಿಯ ಕುರಿತು ವಿವರವಾದ ಮಾಹಿತಿ ನೀಡಿದರು. ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ। ಇಕ್ಬಾಲ್ ಅಹಮದ್ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು.

ವೇದಿಕೆಯಲ್ಲಿ ENT ತಜ್ಞರಾದ ಡಾ। ಅನಂತ್ ಕಾಮತ್, ಲ್ಯಾನ್ಸ್ ಕ್ಲಬ್ ಅಧ್ಯಕ್ಷರಾದ ಲ್ಯಾನ್ ವಿನಯ ಶೆಟ್ಟಿ, ಕಾರ್ಕಳ ರೋಟರಿ ಸಂಸ್ಥೆಯ ಕಾರ್ಯದರ್ಶಿ ರೊ। ಗಣೇಶ್ ಸಾಲಿಯಾನ್, ವಲಯ ಸೇನಾನಿ ರೊ। ಸುರೇಶ್ ನಾಯಕ್, ನಿರ್ಗಮಿತ ಸಹಾಯಕ ಗವರ್ನರ್ ರೊ। ಶೈಲೇಂದ್ರ ರಾವ್, ನಿಯೋಜಿತ ರೋಟರಿ ಸಂಸ್ಥೆ ಅಧ್ಯಕ್ಷರಾದ ರೊ। ನವೀನ್ ಶೆಟ್ಟಿ ಇವರು ಉಪಸ್ಥಿತರಿದ್ದರು.